<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u> ಶ್ರೀರಂಗಪಟ್ಟಣ.

ಸಿ.ಸಿ.ಃ 306/2019

ಪಿ. ಡಬ್ಲ್ಯುಃ 05

ಸಿ. ಡಬ್ಲ್ಯುಃ 05

ಸಾಕ್ಷಿದಾರರ ಹೆಸರು ಃ ಲಕ್ಷ್ಮಣ

ತಂದೆ/ಪತಿಯ ಹೆಸರು ಃ ನಿಂಗೇಗೌಡ

ವಯಸ್ಸು ಃ 57 ವರ್ಷ

ವೃತ್ತಿ ಃ ವ್ಯವಸಾಯ

ವಾಸ ಃ ಹೊಸಹಳ್ಳಿ ಗ್ರಾಮ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 07.06.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ರಿಂದ 3 ಗೊತ್ತು. ಆರೋಪಿಗಳು ಗೊತ್ತು. ನನ್ನ ಸಮಕ್ಷಮ ಆರೋಪಿಗಳು ಮತ್ತು ಪಿರ್ಯಾದಿ ನಡುವೆ ಯಾವುದೇ ಜಗಳವಾಗಿಲ್ಲ. ಗಲಾಟೆ ನಡೆದ ಬಗ್ಗೆ ನಾವು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>

ದಿಃ 01.06.2019 ರಂದು ಬೆಳಿಗ್ಗೆ 11.00 ಸಮಯದಲ್ಲಿ ಹೊಸಆನಂದೂರು ಗ್ರಾಮದ ಮಂಜು ರವರ ಹೆಂಡತಿ ಲಕ್ಷಮ್ಮ ರವರು ಸಾರ್ವಜನಿಕ ರಸ್ತೆಯಲ್ಲಿ ಅನಧಿಕೃತ ವಾಗಿ ನಿರ್ಮಿಸಿಕೊಂಡಿದ್ದ ಕಲ್ನಾರು ಶೀಟ್ ಅನ್ನು ತೆರವುಗೊಳಿಸಲು ನಾನು, ನಮ್ಮ ಪಂಚಾಯಿತಿ ಸಿಬ್ಬಂದಿಗಳಾದ ದೇವರಾಜು, ಸುನೀಲ್ ಹಾಗೂ ಕಾರ್ಯದರ್ಶಿ ಮತ್ತು ಜಯರಾಂ ರವರು ಅಲ್ಲಿಗೆ ಹೋದಾಗ ದಾಸೇಗೌಡ, ಪುನೀತ್, ಮಂಜು, ರಾಜೇಶ್, ಲಕ್ಷಮ್ಮ, ಪ್ರಕಾಶ್ ಅಲಿಯಾಸ್ ನಗುವನಹಳ್ಳಿ ಪ್ರಕಾಶ್, ಚಂದ್ರ, ಜಯಮ್ಮ, ಶ್ರೀನಿವಾಸ್ ಹಾಗೂ ರತ್ನಮ್ಮ ರವರು ಗುಂಪು ಕಟ್ಟಿಕೊಂಡು ಬಂದು ತೆರವುಗೊಳಿಸದಂತೆ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಹಾಗೂ

ಸದರಿ ತೆರವು ಕಾರ್ಯಕ್ಕೆ ಅಡ್ಡಿ ಪಡಿಸಿದ ಆರೋಪಿತರ ಮೇಲೆ ಪಿ.ಡಿ.ಓ ರವರು ಕೆ.ಆರ್.ಸಾಗರ ಪೋಲೀಸ್ ಠಾಣೆಗೆ ದೂರು ನೀಡಿದರು ಮತ್ತು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆಂದು ಹೇಳಿಕೆ ನೀಡಿದ್ದೇನು ಎಂದರೆ ಸುಳ್ಳು. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ.9 ಎಂದು ಗುರುತಿಸಲಾಯಿತು.

ಆರೋಪಿತರು ನನ್ನ ಪರಿಚಯಸ್ಥರಾದ್ದರಿಂದ ಅವರು ಪಿ.ಡಿ.ಓ ರವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಕೂಡ ನನ್ನ ಸಮಕ್ಷಮ ಯಾವುದೇ ಗಲಾಟೆ ನಡೆದಿಲ್ಲವೆಂದು ಮತ್ತು ನಾನು ಘಟನೆ ಸಂಬಂಧ ನಿಪಿ.9 ರಂತೆ ಹೇಳಿಕೆ ನೀಡಿಲ್ಲವಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**</u>

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.